ಅ) ಇತ್ತೀಚೆಗೆ ದಿ: 24-6-93ರಲ್ಲಿ ಕೇಂದ್ರ ಪರಿಶೀಲನಾ ಸಮಿತಿಯು ಸಭೆ ಜರುಗಿಸಿರುತ್ತದೆ. ರಾಜ್ಯದ ಇತರೆ ಜಿಲ್ಲೆಗಳನ್ನೊಳಗೊಂಡಂತೆ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಬಂದಿದ್ದ ಅರ್ಜಿಗಳ ಪರಿಶೀಲನೆ ನಡೆದಿದ್ದು, ಈ ದಿಸೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ಪತ್ರ ನೀಡಲು ಪರಿಗಣಿಸಿರುವ ಪ್ರಸ್ತಾವನೆಗಳ ವಿವರಗಳನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗಿದೆ.

(ಆ) ಕೇಂದ್ರ ಸರ್ಕಾರ ಇನ್ನೂ ಅನುಮತಿ ಪತ್ರ ನೀಡಿರುವುದಿಲ್ಲ.

(ಇ) ಬೀದರ್ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರದಿಂದ ಶಿಫಾರಸ್ಸಾಗಿ ಅನುಮತಿ ಪತ್ರಕ್ಕಾಗಿ ಈ ಕೆಳಕಂಡ ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಮುಂದೆ ಇರುತ್ತದೆ.

(1) ಮೆ: ಅನುಭವ ಮಂಟಪ ಷುಗರ್ಸ್, ಬಸವಕಲ್ಯಾಣ

(2) ದಿ: ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಹಂಚಿ: ಹಚಿಕಮತ್, ಬಾಲ್ಕಿ ತಾಲ್ಲೂಕು.

(3) ಝುವಾರಿ ಆಗ್ರೋ ಕೆಮಿಕಲ್ಸ್, ದೋವಾ (ಹಳ್ಳಿಖೇಡ್-ಕೆ), ಹುಮ್ನಾಬಾದ್ ತಾಲ್ಲೂಕು.

(ಈ) ಇನ್ನೂ ಇಲ್ಲ.

**ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ.**

597- ಶ್ರೀ ಬಿ. ರಾಜುಗೌಡ (ಹನೂರು) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ ಎಷ್ಟು ಇದರಲ್ಲಿ ರೋಗಗ್ರಸ್ಥ ಜವಳಿ ಗಿರಣಿಗಳ ಸಂಖ್ಯೆ ಎಷ್ಟು?*

*ಆ) ರಾಜ್ಯದಲ್ಲಿ ಬೆಳೆಯುವ ಎಲ್ಲಾ ಹತ್ತಿಯನ್ನೂ ನೂಲಾಗಿ ಪರಿವರ್ತಿಸಲು ಈ ಘಟಕಗಳಿಂದ ಸಾಧ್ಯವಾಗುತ್ತದೆಯೇ ಹಾಗಿಲ್ಲವಿದ್ದಲ್ಲಿ ಉದ್ಯಮವನ್ನು ಶಕ್ತಿಶಾಲಿಯಾಗಿ ಬೆಳೆಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ 8.

ರೋಗಗ್ರಸ್ತವಾಗಿರುವ ಜವಳಿ ಗಿರಣಿಗಳ ಸಂಖ್ಯೆ 8.

ಆ) ರಾಜ್ಯದಲ್ಲಿ ಸುಮಾರು 9 ಲಕ್ಷ ಬೇಲಹತ್ತಿ ಉತ್ಪಾದನೆಯಾಗುತ್ತಿದ್ದು ಈ ಎಲ್ಲ ಹತ್ತಿಯನ್ನು ನೂಲಾಗಿ ಪರಿವರ್ತಿಸಲು ರಾಜ್ಯದಲ್ಲಿ ಸಧ್ಯ ಇರುವ ನೂಲಿನ ಗಿರಣಿಗಳಿಂದ ಸಾಧ್ಯವಾಗುವುದಿಲ್ಲ.

ರಾಜ್ಯದಲ್ಲಿ ನೂಲಿನ ಗಿರಣಿಗಳ ಉದ್ಯಮವನ್ನು ಶಕ್ತಿಶಾಲಿಯಾಗಿ ಬೆಳೆಸಲು ಸರ್ಕಾರ ತನ್ನ ಹೊಸ ಜವಳಿ ನೀತಿಯನ್ವಯ ಕಾರ್ಯಕ್ರಮ ರೂಪಿಸಲಿದೆ. 21ನೇ ಶತಮಾನದ ಆರಂಭಕ್ಕೆ ಮೊದಲು ಕನಿಷ್ಟ 6 ಲಕ್ಷ ಕದಿರು ಸಾಮರ್ಥ್ಯದ ನೂಲಿನ ಗಿರಣಿಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು. ಸಹಕಾರಿ ಕ್ಷೇತ್ರ, ಖಾಸಗಿ ಕ್ಷೇತ್ರ ಹಾಗೂ ಜಂಟಿ ಕ್ಷೇತ್ರದಲ್ಲಿ ಈ ಗಿರಣಿಗಳ ಸ್ಥಾಪನೆಗೆ ಉದ್ದೇಶಿಸಲಾಗಿದ್ದು, ಸಣ್ಣ ನೂಲಿನ

ಗಿರಣಿಗಳ ಸ್ಥಾಪನೆಗೆ ಸಹ ಅನುಮತಿ ನೀಡಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿ 6 ಲಕ್ಷ ಕದಿರು ಸಾಮರ್ಥ್ಯ ಹೆಚ್ಚಳವಾದಾಗ ರಾಜ್ಯದಲ್ಲಿ ಉತ್ಪಾದಿಸಲ್ಪಡುವ ಎಲ್ಲಾ ಹತ್ತಿಯನ್ನು ನೂಲಾಗಿ ಪರಿವರ್ತಿಸಲು ಸಾಧ್ಯವಾಗುವುದು.

**ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದಲ್ಲಿ ನೋಂದಾಯಿಸಿರುವ ಘಟಕಗಳು.**

645 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದಲ್ಲಿ ಉಕ್ಕಿನ ಪೀಠೋಪಕರಣಗಳನ್ನು ಮಾಡಲು ನೋಂದಾಯಿತವಾಗಿರುವ ಘಟಕಗಳ ಸಂಖ್ಯೆ ಎಷ್ಟು?*

*ಆ) ನಿಗಮದಲ್ಲಿ ನೋಂದಾಯಿತವಾಗಿರುವ ಎಲ್ಲಾ ಘಟಕಗಳಿಗೆ ಸರಬರಾಜು ಆದೇಶಗಳನ್ನು ನೀಡಲಾಗಿದೆಯೇ? ಆಗಿದ್ದಲ್ಲಿ ಘಟಕಗಳ ಹೆಸರು ಮತ್ತು ಅವುಗಳಿಗೆ ನೀಡಲಾಗಿರುವ ಮೊಬಲಗಿನ ವಿವರ?*

*ಇ) ಇಲ್ಲಿಯವರೆಗೆ ಎಷ್ಟು ಸಣ್ಣ ಕೈಗಾರಿಕಾ ಘಟಕಗಳು ಸರಬರಾಜು ಆದೇಶವನ್ನು ಪಡೆದಿದೆ.*

*ಈ) ನಿಗಮವು ಉಕ್ಕಿನ ಪೀಠೋಪಕರಣಗಳನ್ನು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಲು ಹಾಕಿಕೊಂಡಿರುವ ಕ್ರಮಗಳೇನು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದಲ್ಲಿ 236 ಸಣ್ಣ ಕೈಗಾರಿಕಾ ಘಟಕಗಳು ಉಕ್ಕಿನ ಪಿಠೋಪಕರಣಗಳನ್ನು 1992-93ನೇ ಸಾಲಿನಲ್ಲಿ (27-8-93ರ ವರೆಗೆ) ಸರಬರಾಜು ಮಾಡಲು ನೋಂದಾಯಿತವಾಗಿದೆ.

ಆ) ನಿಗಮದಲ್ಲಿ ನೋಂದಾಯಿತವಾಗಿರುವ ಎಲ್ಲಾ ಘಟಕಗಳಿಗೆ ಸರಬರಾಜು ಆದೇಶವನ್ನು ನೀಡಲಾಗಿಲ್ಲ. ಆದರೆ 185 ಸಣ್ಣ ಕೈಗಾರಿಕಾ ಘಟಕಗಳಿಗೆ ಮಾತ್ರ ದರ ಒಪ್ಪಂದದ ಅಡಿಯಲ್ಲಿ ಸರಬರಾಜು ಮಾಡಲು ಆದೇಶವನ್ನು ನೀಡಲಾಗಿದೆ. ಇದರ ಪೈಕಿ 66 ಸಣ್ಣ ಕೈಗಾರಿಕಾ ಘಟಕಗಳು ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಿರುತ್ತವೆ.

(ಅವುಗಳಿಗೆ ನೀಡಲಾಗಿರುವ ಮೊಬಲಗನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.)

ಇ) ಇಲ್ಲಿಯವರೆಗೆ ರಾಜ್ಯಾದ್ಯಂತ 185 ಸಣ್ಣ ಕೈಗಾರಿಕಾ ಘಟಕಗಳು ದರ ಒಪ್ಪಂದದ ಅಡಿಯಲ್ಲಿ ಸರಬರಾಜು ಮಾಡಲು ಆದೇಶವನ್ನು ಪಡೆದಿದೆ.

ಈ) 93-94ನೇ ಸಾಲಿಗೆ ಕೆ.ಎಸ್.ಐ.ಎಂ.ಸಿ.ಯು ಪೀಠೋಪಕರಣಗಳಿಗೆ ದರ ಒಪ್ಪಂದವನ್ನು ನಿಗದಿ ಪಡಿಸಿದ್ದು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಕೈಗಾರಿಕಾ ಘಟಕಗಳು ನೋಂದಾಯಿತವಾಗಿದೆ. ದರ ಒಪ್ಪಂದದಾರರ ಹೆಸರುಗಳನ್ನೊಳಗೊಂಡ ಪಟ್ಟಿಯನ್ನು ಈಗಾಗಲೇ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಕಳುಹಿಸಲಾಗಿದೆ. ಮತ್ತು ಆದೇಶಗಳನ್ನು ನೇರವಾಗಿ ಘಟಕಗಳಿಗೆ ನೀಡಬೇಕಾಗಿ ಕೋರಲಾಗಿದೆ. ನಿಗಮವು ಸಹ ಈ ದಿಸೆಯಲ್ಲಿ ಶ್ರಮ ವಹಿಸಿ ಹೆಚ್ಚು ಸರಬರಾಜು ಆದೇಶವು ಪಡೆದು ಆಯಾಯಾ ಜಿಲ್ಲೆಯಲ್ಲಿ ನೋಂದಾಯಿತವಾಗಿರುವ ಸಣ್ಣ ಕೈಗಾರಿಕಾ ಘಟಕಗಳಿಗೆ ಸಿಗುವಂತೆ ಕ್ರಮ ಕೈಗೊಳ್ಳಲಾಗಿದೆ.